

# ಗೊಂಬೆಗಳ ಪರಪಂಚ





ಮುದ್ದಿನ ಗೊಂಬೆಗಳೊಂದಿಗೆ ಸಿರೀಶಾ, ನಾಗೇಶ್ ದಂಪತಿ

■ ರೂಪಾ ಕೆ.ಎಂ.

ಚಳಿಗಾಲದ ಚುಮುಗುಡುವ ಚಳಿಯ ಮಧ್ಯೆ ದಿನಕರನು ಮಕರ ರಾಶಿಗೆ ಪ್ರವೇಶ ಪಡೆಯಲು ದಿನಗಣನೆ ಶುರುವಾಗುತ್ತದೆ. ಹೀಗೆ ದಿನಗಳನ್ನು ಎಣಿಸುವಾಗ ಗೋದಾಮಿನ ಕಪಾಟಿನಲ್ಲಿ ಭದ್ರವಾಗಿ ನೆಲೆಯೂರಿದ್ದ ಬಣ್ಣ ತುಂಬಿಕೊಂಡ ಬಗೆಬಗೆಯ ಗೊಂಬೆಗಳು ಮೆಲ್ಲನೆ ಕಪಾಟಿನಿಂದ ಜಾರಿ, ಬುವಿಗೆ ಬರುತ್ತವೆ. ಇವು ಹೀಗೆ ಬರುವಾಗ ಖಾಲಿ ಕೈಯಲ್ಲಿ ಬರುವುದಿಲ್ಲ, ಹಲವು ಕಥೆಗಳನ್ನು ಹೊತ್ತು ತರುತ್ತವೆ!

ಪ್ರಕೃತಿಯಲ್ಲಿ ಸುಗ್ಗಿಯ ಸಂಭ್ರಮ ಕಳೆಗಟ್ಟುತ್ತಿದ್ದರೆ, ಒಂದಿನಿತೂ ಬಣ್ಣ ಕಳೆದುಕೊಳ್ಳದ ಈ ಗೊಂಬೆಗಳು ಪ್ರತಿ ವರ್ಷವೂ ಸುಗ್ಗಿಯ ಸಂಭ್ರಮವನ್ನು ಹೆಚ್ಚಿಸುತ್ತವೆ. ಪ್ರತಿವರ್ಷ ನಿರ್ದಿಷ್ಟ ವಸ್ತುವಿಷಯದ ಭಾಗವಾಗುತ್ತ ಹೊಸ ಲೋಕವನ್ನು ಸೃಷ್ಟಿಸುತ್ತವೆ.

ಹೀಗೊಂದು ಅನೂಹ್ಯ ಗೊಂಬೆಗಳ ಲೋಕವು ಬೆಂಗಳೂರಿನ ಹಳೆ ಸರ್ಜಾಪುರ ರಸ್ತೆಯಲ್ಲಿರುವ ಮನೆಯೊಂದರಲ್ಲಿ ಪ್ರತಿ ವರ್ಷವೂ ಅನಾವರಣಗೊಳ್ಳುತ್ತದೆ. ತಮಿಳುನಾಡಿನ ಗೊಂಬೆ ತಯಾರಿ ಬೀದಿಗಳು, ಕಂಚಿಯ ಅಷ್ಟಮುಡಿ ಸೇರಿದಂತೆ ದೇಶದ ಹಲವೆಡೆ ತಯಾರಾಗುವ ಗೊಂಬೆಗಳನ್ನು ಖರೀದಿಸಿ, ಅವುಗಳನ್ನು ಬೇರೆ ಬೇರೆ 'ಥೀಮ್' (ಪರಿಕಲ್ಪನೆ)ನಲ್ಲಿ, ಚಂದಗಾಣಿಸುತ್ತಾರೆ ಗೊಂಬೆ ಪ್ರದರ್ಶನದ ರೂವಾರಿ ಸಿರೀಶಾ ಮತ್ತು ನಾಗೇಶ್ ದಂಪತಿ.

ತಮ್ಮ ಅನನ್ಯ ಕುಸುರಿ ಕಲೆಯ ಕಾರಣಕ್ಕೋ ಅಥವಾ ಪರಿಕಲ್ಪನೆಯ ಕಾರಣಕ್ಕೋ ಜೀವ ತಳೆಯುವ ಈ ಗೊಂಬೆಗಳು ನೋಡುಗರ ಕಣ್ಣಲ್ಲಿ ಸದಾ 'ಮುದ್ದು ಬರಿಸುವ' ಸ್ಥಾನವನ್ನು ಅನಾಯಾಸವಾಗಿ ಗಿಟ್ಟಿಸಿಕೊಳ್ಳುತ್ತವೆ. ಕಂಚು, ಹಿತ್ತಾಳೆ, ಮರ, ಮಣ್ಣು, ಕಾಗದ, ಪಿಂಗಾಣಿ, ಬಟ್ಟೆ, ಟೆರ್ರಾಕೋಟ ಹೀಗೆ ನಾನಾ ಬಗೆಯ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಗೊಂಬೆಗಳನ್ನು ಜತನದಿಂದ ಕಾಪಾಡುತ್ತಿರುವ ಈ ದಂಪತಿ, ಸಂಕ್ರಾಂತಿ ಆರಂಭಗೊಳ್ಳುವ 20 ದಿನಗಳಿಗೂ ಮುಂಚೆ ಆಯ್ದ ಗೊಂಬೆಗಳನ್ನು ಕೂರಿಸುತ್ತಾರೆ. ಪ್ರತಿ ವರ್ಷವೂ ಹೊಸ ವಸ್ತುವಿಷಯವನ್ನು ಆಯ್ದುಕೊಂಡು ಅದಕ್ಕೆ ತಕ್ಕಂತೆ ಗೊಂಬೆಗಳನ್ನು ಕೂರಿಸುವುದು ವಿಶೇಷ.

ಈ ಬಾರಿಯ ವಸ್ತುವಿಷಯ 'ಏಳರ ಶಕ್ತಿ'. ಅಂದರೆ ಸಪ್ತ ಮಾತೃಕೆ, ಸಪ್ತ ಸಾಗರ, ಸಪ್ತ ಚಿರಂಜೀವಿಗಳು, ಸಪ್ತ ಋಷಿ, ಸಪ್ತ ಸ್ವರ, ಸಪ್ತಪದಿ, ಸಪ್ತ ಬಣ್ಣಗಳು. ಏಳು ಎನ್ನುವುದು ಹೇಗೆಲ್ಲ ನಮ್ಮ ಬದುಕಿನೊಳಗೆ ಹಾಸುಹೊಕ್ಕಾಗಿದೆ ಎಂಬುದನ್ನು ಪ್ರತಿನಿಧಿಸುವ ಈ ಗೊಂಬೆಗಳು ಒಂದಕ್ಕಿಂತ ಒಂದು ಅಮೋಘ. ಹಾಗೆಯೇ ಶಕ್ತಿದೇವತೆಗಳಾದ ಕಂಚಿ ಕಾಮಾಕ್ಷಿ, ಮಧುರೈ ಮೀನಾಕ್ಷಿ, ಕಾಶಿ ವಿಶಾಲಾಕ್ಷಿ, ಬಾಲತ್ರಿಪುರ ಸುಂದರಿ, ಕೊಲ್ಲೂರು ಮೂಕಾಂಬಿಕೆ, ದುರ್ಗಾ ವಿರಾಟ್‌ರೂಪ, ಮೈಸೂರು ಚಾಮುಂಡೇಶ್ವರಿ, ಹೊರನಾಡು ಅನ್ನಪೂರ್ಣೇಶ್ವರಿ ಗೊಂಬೆಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಗೊಂಬೆಗಳ ಕುರಿತು ಸಿರೀಶಾ ಅವರನ್ನು ಮಾತಿಗೆಳೆದಾಗ ಅವರು ಹೇಳಿದ್ದಿಷ್ಟು...